ಶ್ರೀ ಮಧುಗೈ ಶನಿಮಹಾತ್ಮ ದೇವಾಲಯದ ಆಡಳಿತದ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಉಚ್ಚ ನ್ಯಾಯಾಲಯದ ಅನುಮತಿ ಇಲ್ಲದೆ ದೇವಾಲಯದ ಆದಾಯವನ್ನು ಯಾವುದೇ ಅಭಿವೃದ್ಧಿ ಕಾಮಗಾರಿಗೆ ಬಳಸುವಂತಿಲ್ಲದ ಕಾರಣ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವುದಿಲ್ಲ.

ತುರುವೇಕೆರೆ ತಾಲ್ಲೂಕು ಬೊಮ್ಮೇನಹಳ್ಳಿ ಕೆರೆ ಪಕ್ಕದ ಹೇಮಾವತಿ ಚಾನಲ್‌ಗೆ ತೂಬು ಇಡುವುದರ ಬಗ್ಗೆ

2375(2816) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ತುರುವೇಕೆರೆ ತಾಲ್ಲೂಕು ಬೊಮ್ಮೇನಹಳ್ಳಿ (ಕಸಬಾ) ಕೆರೆ ಇದ್ದು ಇದರ ಪಕ್ಕದಲ್ಲಿ ಹೇಮಾವತಿ ಚಾನಲ್ ಇದ್ದು, ಸದರಿ ಕೆರೆ ಹತ್ತಾರು ವರ್ಷಗಳಿಂದ ಒಣಗುತ್ತಿದ್ದು, ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ಜನರು ಹಾಗೂ ದನಕರುಗಳಿಗೆ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಇಲ್ಲಿ ಯಾವಾಗಲೂ ಹೇಮಾವತಿ ನೀರು ಹರಿಯುವ ಇಲ್ಲಿನ ಚಾನಲ್‌ಗೆ ಒಂದು ತೂಬು ಇದ್ದು ದನಕರುಗಳಿಗೆ ಸರ್ಕಾರ ಸಹಾಯ ಮಾಡುವುದೇ

ಇ) ಈ ವರ್ಷ ಈ ಕೆಲಸ ಮಾಡಿ ಆ ಭಾಗದ ಜನರಿಗೆ ಮತ್ತು ದನಕರುಗಳಿಗೆ ಸರ್ಕಾರ ಸಹಾಯ ಮಾಡುವುದೇ?

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಮಂತ್ರಿಗಳು) :—

ಅ) ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ತುರುವೇಕೆರೆ ತಾಲ್ಲೂಕು, ಬೊಮ್ಮೇನಹಳ್ಳಿ ಕೆರೆಯು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ 8ರ 2ನೇ ಕಿ.ಮೀ.ನಲ್ಲಿನ ನಾಲೆಯ ಎಡಭಾಗದಲ್ಲಿ ಬರುತ್ತಿದೆ. ಸದರಿ ಕೆರೆಯು 1995-96ರಿಂದ ಒಣಗಿರುವ ಬಗ್ಗೆ ವರದಿ ಬಂದಿಲ್ಲ ಹಾಗೂ ಮಳೆಗಾಲದಲ್ಲಿ ತುಂಬುತ್ತಿರುತ್ತದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತುರವೇಕೆರೆ ತಾಲ್ಲೂಕಿನಲ್ಲಿ ಕೆರೆಗಳ ದುರಸ್ತಿ

2376(2817) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.